ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE :

### ಆರ್‌ಜೆ ವಿಚಾರಣೆಗೆ ಹಾಜರು ನಿರೀಕ್ಷೆ | ಪೊಲೀಸ್ ಆಯುಕ್ತರಿಗೆ ಸಂತ್ರಸ್ತೆ ಪತ್ರ | ಎಸ್‌ಐಟಿ ತನಿಖೆಗೆ ಅಸಮಾಧಾನ

# ಎಸ್‌ಐಟಿ ಪಕ್ಷಪಾತ ತನಿಖೆಗೆ ಸಿಡಿ ಲೇಡಿ ಕೆಂಡ

5/4/21

ಸಂ.ಕ.ಸಮಾಚಾರ ಬೆಂಗಳೂರು

ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧದ ರಾಸಲೀಲೆ ಸಿಡಿ ಹಗರಣದಲ್ಲಿ ಸಂತ್ರಸ್ತೆಯನ್ನೇ ಆರೋಪಿಯಂತೆ ನಿರಂತರ ವಿಚಾರಣೆ ಮಾಡುತ್ತಿರುವ ಎಸ್‌ಐಟಿ, ಪ್ರಕರಣದ ಆರೋಪಿ ಬಹಿರಂಗವಾಗಿ ಓಡಾಡಲು ಅವಕಾಶ ನೀಡಿದೆ ಎಂದು ಸ್ವತಃ ಪ್ರಕರಣದ ಸಂತ್ರಸ್ತೆಯೇ ಪೊಲೀಸರ ವಿರುದ್ಧ ತಿರುಗಿಬಿದ್ದಿದ್ದಾಳೆ.

ಮಾಜಿ ಸಚಿವ ಜಾರಕಿಹೊಳಿ ವಿಚಾರಣೆಗೆ ಹಾಜರಾಗಲಿರುವ ಮುನ್ನಾದಿನವಾದ ಭಾನುವಾರ ಸಂತ್ರಸ್ತೆಯು ನೇರವಾಗಿ ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಅವರಿಗೆ ಪತ್ರ ಬರೆದು ತನ್ನ ಅಸಮಾಧಾನ ಹೊರಹಾಕಿದ್ದಾಳೆ. ಈ ಮಧ್ಯೆ ಸೋಮವಾರ ಮಾಜಿ ಸಚಿವ ಜಾರಕಿಹೊಳಿ ವಿಚಾರಣೆಗೆ ಪೊಲೀಸರ ಎದುರು ಹಾಜರಾಗಬೇಕಾಗಿದೆ. ಶನಿವಾರ ಜ್ವರದ ನೆಪವೊಡ್ಡಿ ವಿಚಾರಣೆಗೆ ಗೈರು ಹಾಜರಾಗಿದ್ದ ಜಾರಕಿಹೊಳಿ ಮುಂದಿನ ನಡೆ ಕೂಡ ನಿಗೂಢವಾಗಿದೆ.

ರಾಸಲೀಲೆ ಸಿಡಿ ಹಗರಣದಲ್ಲಿ ಭಾಗಿಯಾಗಿದ್ದಾಳೆ ಎನ್ನಲಾದ ಯುವತಿಯು ಬರೆದಿರುವ ಮೂರು ಪುಟಗಳ ಪತ್ರದಲ್ಲಿ ಕಳೆದ ಆರು ದಿನಗಳಿಂದ ಎಸ್‌ಐಟಿ ಪೊಲೀಸರು ತನ್ನನ್ನೇ ಕೇಂದ್ರೀಕೃತವಾಗಿಟ್ಟುಕೊಂಡು ವಿಚಾರಣೆ ನಡೆಸುತ್ತಿದ್ದು, ತಾನು ಸಂತ್ರಸ್ತೆಯೋ ಅಥವಾ ಆರೋಪಿಯೋ ಎಂಬುದು ತನಗೇ ಗೊತ್ತಾಗದಂತಹ ಸ್ಥಿತಿ ಎದುರಾಗಿದೆ ಎಂದು ಅವಲತ್ತುಕೊಂಡಿದ್ದಾಳೆ.



ಸಿಡಿ ಲಲನೆ ಪುರಾಣ

''ಎಸ್‌ಐಟಿ ಪೊಲೀಸರು ಪ್ರಕರಣ ಸಂಬಂಧ ಸಿಆರ್‌ಪಿಸಿ ಸೆಕ್ಷನ್ 161ರಡಿ ಹೇಳಿಕೆ ದಾಖಲಿಸಿಕೊಳ್ಳಲು ಪ್ರಶ್ನೆಗಳನ್ನು ಕೇಳುತ್ತಿದ್ದು, ನಾನು ಮಾರ್ಚ್ 30, 31, ಏಪ್ರಿಲ್ 1, 2ರಂದು ಸಂಪೂರ್ಣವಾಗಿ ಎಲ್ಲ ವಿಚಾರಗಳನ್ನು ವಿವರಿಸಿದ್ದೇನೆ. ಸತತ ವಿಚಾರಣೆ ಎದುರಿಸಿದ ನಂತರ ಒಟ್ಟಾರೆ ಪ್ರಕ್ರಿಯೆ ನೋಡಿದರೆ ನಾನು ಸಂತ್ರಸ್ತೆಯೋ ಅಥವಾ ಆರೋಪಿಯೋ ಎಂದು ಅನುಮಾನ ಮೂಡಿದೆ. ಪ್ರಕರಣದ ಆರೋಪಿಗೆ ಕೇವಲ ಮೂರು ಗಂಟೆಗಳ ಕಾಲ ವಿಚಾರಣೆ ನಡೆಸಿ ಅವರ ವಕೀಲರೊಂದಿಗೆ ಮತ್ತೊಮ್ಮೆ ವಿಚಾರಣೆಗೆ ಹಾಜರಾಗಲು ಅನುಮತಿ ನೀಡಿದ್ದು, ಅವರನ್ನು ಮುಕ್ತವಾಗಿ ಓಡಾಡಿಕೊಂಡು ಇರಲು ಎಸ್‌ಐಟಿ ಅವಕಾಶ ಮಾಡಿಕೊಟ್ಟು ನನ್ನ ಹೇಳಿಕೆ ಪಡೆಯಲಾಗುತ್ತಿದೆ'' ಎಂದು ದೂರಿದ್ದಾಳೆ. ನನ್ನ ಪಿಜಿ ಮೇಲೆ ದಾಳಿ ಮಾಡಿ ಅಲ್ಲಿರುವ ಸಾಕ್ಷ್ಯಗಳನ್ನು ನಾಶ ಮಾಡಿ ನನ್ನನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಸರ್ಕಾರದ ಒತ್ತಡಕ್ಕೆ ಮಣಿದಿದ್ದಾರೆ. ಸರ್ಕಾರದ ಒತ್ತಡಕ್ಕೆ ಮಣಿಯದೇ ನಾನೊಬ್ಬ ಸಂತ್ರಸ್ತೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ವಿಚಾರಣೆ ನಡೆಸಬೇಕು ಎಂದು ಮನವಿ ಮಾಡಿದ್ದಾಳೆ.

- ಬಿಎಸ್‌ವೈ ಹೇಳಿಕೆಗೂ ಅತೃಪ್ತಿ
- ಯುವತಿ ವಿರುದ್ಧವೇ ಷಡ್ಯಂತ್ರ ಶಂಕೆ

ಎಸ್‌ಐಟಿ ವಿಚಾರಣೆ ವೇಳೆ ಯುವತಿಯ ಮೊಬೈಲ್ ಕರೆಗಳ ಆಧಾರದ ಮೇಲೆ ಮಾಜಿ ಸಚಿವ ಡಿ.ಸುಧಾಕರ್ ಅವರಿಗೂ ಹಾಜರಾಗುವಂತೆ ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಸುಧಾಕರ್, ಎಸ್‌ಐಟಿ ಅಧಿಕಾರಿಗಳು ನನ್ನನ್ನು ಭೇಟಿ ಮಾಡಿ ಚರ್ಚಿಸಿರುವುದು ನಿಜ. ಒಂದೆರಡು ದಿನಗಳಲ್ಲಿ ಮಾಹಿತಿ ನೀಡಲು ಬರುವಂತೆ ಸೂಚಿಸಿದ್ದಾರೆ. ಈ ಪ್ರಕರಣದಲ್ಲಿ ನನ್ನದೇನೂ ಪಾತ್ರವಿಲ್ಲ. ಆ ಬಗ್ಗೆ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವೆ ಎಂದಿದ್ದಾರೆ. ಹೀಗಾಗಿ ಸೋಮವಾರ ಇಲ್ಲವೇ ಮಂಗಳವಾರ ಸುಧಾಕರ್ ಎಸ್‌ಐಟಿ ಎದುರು ಹಾಜರಾಗುವ ಸಾಧ್ಯತೆ ಇದೆ.

## ಪೊಲೀಸರು ಸೆಕ್ಷನ್ ಏಳು ಕೈಬಿಟ್ಟಿದ್ದೇಕೆ

ಯುವತಿಗೆ ಸರ್ಕಾರಿ ನೌಕರಿ ಕೊಡಿಸುವುದಾಗಿ ವಂಚನೆ ಮಾಡಿರುವ ಆರೋಪ ಎದುರಿಸುತ್ತಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಿಸುವಾಗ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 7ರಡಿ ದೂರು ದಾಖಲಿಸದೇ ಇರುವುದು ಅಚ್ಚರಿ ಮೂಡಿಸಿದೆ. ಸರ್ಕಾರಿ ಹುದ್ದೆಯಲ್ಲಿರುವ ವ್ಯಕ್ತಿ ಯಾವುದೇ ವ್ಯಕ್ತಿ ಅಥವಾ ಸಂಘಟನೆಯಿಂದ ಯಾವುದಾದರೂ ರೀತಿಯಲ್ಲಿ ಭ್ರಷ್ಟಾಚಾರ ನಡೆಸಿದಾಗ ನೌಕರ ಅಥವಾ ಸೇವಕನ ವಿರುದ್ಧ ಸೆಕ್ಷನ್ 7ರಡಿ ಪ್ರಕರಣ ದಾಖಲಿಸುವುದು ಕಾನೂನು ಪ್ರಕಾರ ಕಡ್ಡಾಯ. ಆದರೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಯುವತಿ ಸಲ್ಲಿಸಿದ ದೂರಿನಲ್ಲಿ ತನಗೆ ನೌಕರಿ ಕೊಡಿಸುವುದಾಗಿ ವಂಚಿಸಿ, ಲೈಂಗಿಕವಾಗಿ ಬಳಸಿಕೊಂಡಿದ್ದಾರೆ ಎಂದು ದೂರು ಸಲ್ಲಿಸಿದ್ದರೂ ಕೂಡ ಸೆಕ್ಷನ್ 7ರಡಿ ಪ್ರಕರಣ ದಾಖಲಿಸಿಲ್ಲ. ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸಂಪುಟ ದರ್ಜೆಯ ಸಚಿವರಾಗಿದ್ದಾಗ ಯುವತಿಗೆ ಸರ್ಕಾರಿ ಕೆಲಸ ಕೊಡಿಸುವ ಭರವಸೆ ನೀಡಿ ಆಕೆಯನ್ನು ಬಳಸಿಕೊಂಡಿದ್ದರು ಎಂಬ ವಿಚಾರ ದೂರಿನಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಹೀಗಾಗಿ ಸೆಕ್ಷನ್ 7ರಡಿ ದೂರು ದಾಖಲಾದರೆ ತತ್‌ಕ್ಷಣ ಮಾಜಿ ಸಚಿವ ಬಂಧನಕ್ಕೆ ಒಳಪಡಬೇಕಾಗುತ್ತಿತ್ತು.